

# ಪರ್ವತ ಅಲ್ಲ; ಏಕ ಶಿಲೆ!



ಪರ್ವತದಂತಿರುವ ಈ ಕಲ್ಲನ್ನೊಮ್ಮೆ ನೋಡಿ. ಬೃಹದಾಕಾರವಾಗಿರುವ ಈ ಏಕ ಶಿಲಾ ಬಂಡೆ ಕೊಲಂಬಿಯಾದಲ್ಲಿದೆ. ಪ್ರವಾಸಿ ತಾಣವಾಗಿ ರೂಪುಗೊಂಡಿರುವ ಇದಕ್ಕೆ ಗುವಾತಪೆ ರಾಕ್ ಎಂದೇ ಹೆಸರು. ಗುವಾತಪೆ ಎಂದರೆ ಸ್ಪ್ಯಾನಿಷ್ ಭಾಷೆಯಲ್ಲಿ ಕಲ್ಲು (ದಿ ಸ್ಟೋನ್) ಎಂದು ಅರ್ಥ.

ಕೊಲಂಬಿಯಾ ನಗರದಿಂದ ಒಂದು ಕಿಲೋ ಮೀಟರ್ ದೂರದಲ್ಲಿ ಗುವಾತಪೆ ಎಂಬಲ್ಲಿರುವ ಈ 'ಪರ್ವತ ಬಂಡೆ' ಸುಮಾರು ಒಂದು ದಶಲಕ್ಷ ವರ್ಷಗಳಿಗಿಂತಲೂ ಮೊದಲೇ ರೂಪುಗೊಂಡಿತ್ತು ಎನ್ನುತ್ತದೆ ಇತಿಹಾಸ. ಕಲ್ಲಿನ ಬುಡದವರೆಗೂ ಬಸ್, ಕಾರು ಮತ್ತಿತರ ವಾಹನಗಳ ಸೌಲಭ್ಯವಿದೆ. ಬಂಡೆಯ ಗಾತ್ರ ಮತ್ತು ವಿನ್ಯಾಸವನ್ನು ಕಂಡ ಕೊಲಂಬಿಯಾ ಸರ್ಕಾರ ಈ ಬಂಡೆಯನ್ನು 'ರಾಷ್ಟ್ರೀಯ ಸ್ಮಾರಕ' (ನ್ಯಾಷನಲ್ ಮಾನ್ಯುಮೆಂಟ್) ಎಂದು ಗುರುತಿಸಿದೆ. ಈ ಬೃಹತ್ ಬಂಡೆಯನ್ನು 1954ರಲ್ಲಿ ಮೊದಲ ಬಾರಿಗೆ ಸ್ಥಳೀಯ ವ್ಯಕ್ತಿಯೊಬ್ಬ ಏರಿದ್ದ. ಇದನ್ನು ಏರಲು ಆತನಿಗೆ ಐದು ದಿನಗಳು ಬೇಕಾಗಿತ್ತು. ಜರ್ಮನಿಯ ವಿಜ್ಞಾನಿಯೊಬ್ಬರು ಈ ಬಂಡೆಯ ಮೇಲೆ ಔಷಧೀಯ ಸಸ್ಯಗಳಿರುವುದನ್ನು ಪತ್ತೆ ಹಚ್ಚಿದ್ದರು. ಅದಾಗಿ ಕೆಲ ವರ್ಷಗಳ ಬಳಿಕ ಈ ಬಂಡೆಯ ಮೇಲೆ ಏರಲು ಪ್ರವಾಸಿಗರಿಗೆ ಅನುಕೂಲವಾಗುವಂತೆ ಮೆಟ್ಟಿಲುಗಳನ್ನು ಕಟ್ಟಲಾಯಿತು. ಒಟ್ಟು 740 ಮೆಟ್ಟಿಲುಗಳು ಇಲ್ಲಿವೆ. ಕಲ್ಲಿನ ತುತ್ತ ತುದಿಯಲ್ಲಿ ಕಟ್ಟಡವನ್ನೂ ನಿರ್ಮಿಸಲಾಗಿದೆ. ಇದರ ಮೂಲಕ ಪ್ರವಾಸಿಗರು ಸುತ್ತಮುತ್ತಲ ವಿಹಂಗಮ ನೋಟವನ್ನು ಕಣ್ತುಂಬಿಕೊಳ್ಳಬಹುದು.

ಇತ್ತೀಚೆಗೆ ಇಲ್ಲಿ ಪ್ರವಾಸಿಗರಿಗಾಗಿ ರೆಸಾರ್ಟ್, ರೆಸ್ಟೋರೆಂಟ್, ಮಳಿಗೆಗಳು, ಬಾಡಿಗೆ ಮನೆಗಳನ್ನು ನಿರ್ಮಿಸಲಾಗಿದೆ. ಕೊಲಂಬಿಯಾದ ಪ್ರಮುಖ ಪ್ರವಾಸಿ ತಾಣವಾಗಿರುವ 'ಗುವಾತಪೆ ರಾಕ್' ವಿಶ್ವ ಭೂಪಟದಲ್ಲಿ ಸ್ಥಾನ ಪಡೆದಿದೆ.

**– ಯು. ವೇಣೂರು**